# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ** 5019/2022 ಫ್ರಾಸಾ-28
ಚಾಸಾ-44

ದಿನಾಂಕಃ 20-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ನರಸಿಂಹಯ್ಯ ಟಿ. |
| **ತಂದೆಯ / ಗಂಡನ ಹೆಸರು** | ತಿಪ್ಪಯ್ಯ ಟಿ.ಎನ್ |
| **ವಯಸ್ಸು** | 46 |
| **ಉದ್ಯೋಗ** | ಹೆಚ್.ಸಿ-215, ಕೊರಟಗೆರೆ ವೃತ್ತ ನಿರೀಕ್ಷಕರ ಕಛೇರಿ |
| **ವಾಸಸ್ಥಳ** | ಕೊರಟಗೆರೆ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು 2021 ರಿಂದ ಇಲ್ಲಿಯವರೆಗೂ ಕೊರಟಗೆರೆ ವೃತ್ತ ನಿರೀಕ್ಷಕರ ಕಛೇರಿಯಲ್ಲಿ ಹೆಚ್.ಸಿ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿ. 19.02.2022 ರಂದು ಚಾಸಾ-50 ರವರ ಆದೇಶದಂತೆ ಪೊಲೀಸರ ವಶದಲ್ಲಿದ್ದ ಆರೋಪಿ ಪುನಿತ್ ನನ್ನು ಮಲ್ಲೇಶ್ವರ ರಸ್ತೆ ರುದ್ರ ಭೂಮಿಗೆ ಕರೆದುಕೊಂಡು ಹೋಗಿರುತ್ತೇನೆ. ಆ ಕಾಲಕ್ಕೆ ನನ್ನ ಜೊತೆ ಚಾಸಾ-43, ಚಾಸಾ-36 ರವರು ಕೂಡ ಕರ್ತವ್ಯದಲ್ಲಿದ್ದರು. ಚಾಸಾ-17 ಮತ್ತು 18 ರವರ ಜೊತೆಯಲ್ಲಿ ಚಾಸಾ-48 ರವರು , ಚಾಸಾ-50 ರವರು ಕೂಡ ಹಾಜರಿದ್ದು ಆರೋಪಿ ಪುನಿತ್ ರವರು ಮೃತ ಸುಮಿತ್ರಾಳನ್ನು ಹೂತಿರುತ್ತೇವೆಂದು ಜಾಗ ತೋರಿಸಿದ್ದು. ಸದರಿ ಸ್ಥಳವನ್ನು ಪೌರ ಕಾರ್ಮಿಕರಾದ ಚಾಸಾ-10 ರಿಂದ 22 ರವರ ಸಹಾಯದಿಂದ ಶವವನ್ನು ಗುಂಡಿಯಿಂದ ಹೊರತೆಗೆದಿದ್ದು ಆ ಸಮಯದಲ್ಲಿ ನಿಪಿ-13 ರಂತೆ ಬೆಳಿಗ್ಗೆ 10-30 ರಿಂದ 11-00 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತಾರೆ. ಆ ಕಾಲಕ್ಕೆ ನಾನು ಆರೋಪಿಯ ಬೆಂಗಾವಲು ಕರ್ತವ್ಯವನ್ನು

ನಿರ್ಹಿಹಿಸಿರುತ್ತೇನೆ. ವಿ.ಸಿ. ಮುಖಾಂತರ ಹಾಜರುಪಡಿಸಿದ ಆರೋಪಿ ಪುನಿತ್ ನನ್ನು ನೋಡಿ ಗುರುತಿಸಿರುತ್ತೇನೆ. ನಾನು ಶವ ತನಿಖಾ ಸಮಯದಲ್ಲಿ ಮತ್ತು ಮರಣೋತ್ತರ ಪರೀಕ್ಷೆ ಸಮಯದಲ್ಲಿ ಹಾಜರಿದ್ದೇನು.

**<u>ಪಾಟೀಸವಾಲು ಶ್ರೀ. ಎಂ.ಎಂ. ವಕೀಲರಿಂದ ಆರೋಪಿ ಪರವಾಗಿಃ-</u>**

ರುದ್ರ ಭೂಮಿಯಲ್ಲಿ ಚಾಸಾ-1 ಪಿರ್ಯಾದಿ ಹಾಜರಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ನಾನು ಆರೋಪಿ ಬೆಂಗಾವಲು ಕರ್ತವ್ಯಕ್ಕೆ ನೇಮಕವಾಗಿರಲಿಲ್ಲ ಮತ್ತು ಆರೋಪಿಯನ್ನು ರುದ್ರ ಭೂಮಿಗೆ ಕರೆದುಕೊಂಡು ಹೋಗಿಲ್ಲದೇ ಇದ್ದರೂ ನಾನು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**